◆ **ಶಿವರಾಮ ಕಾರಂತರೂ ನೀವೂ ಒಂದೇ ಸೀಮೆಯವರು.**

ಹೌದು, ನನ್ನೂರು ಗುಂಡ್ಮಿ, ಸಮುದ್ರತೀರದ ಊರೇ. ಕಾರಂತರ ಕೋಟದಿಂದ ಒಂದು ಮೂರು ಮೈಲಿ ಈಚೆ. ಇಲ್ಲಿಂದ ಕಾಗೆ ಹೋದಹಾಗೆ ಕಡಲತೀರದಲ್ಲೇ ಹಾರಿಹೋದರೆ ಸಿಗುತ್ತೆ. ಪಶ್ಚಿಮಕ್ಕೆ ಹಂಗಾರಕಟ್ಟೆ ಅಂತ ಒಂದು ಊರಿದೆ. ಅಲ್ಲಿ ಒಂದು ನದಿ ಬಂದು ಕಡಲಿಗೆ ಸೇರುತ್ತೆ. ಕಾರಂತರ 'ಮರಳಿ ಮಣ್ಣಿಗೆ'ಯ ಲೊಕೇಶಿಯಾ ಅಲ್ಲಿಂದಲೇ ಶುರುವಾಗಿ ನಮ್ಮೂರನ್ನು ದಾಟಿ, ಕೋಟ ಕೋಟೇಶ್ವರ ದಾಟಿ ಕುಂದಾಪುರದವರೆಗೆ ಹೋಗುತ್ತೆ.

◆ **ಕುಂದಾಪುರ ಕನ್ನಡ ಬಹಳ ವಿಶಿಷ್ಟ. ಆದರೆ ಅದು ಈ ಭಾಗದ ಬರಹಗಳಲ್ಲಿ ಅಷ್ಟಾಗಿ ಬಳಕೆಯಾಗಲಿಲ್ಲ.**

ಧಾರವಾಡ ಕನ್ನಡದ ಹಾಗೆ ಮಲೆನಾಡಿನ ಕನ್ನಡದ ಹಾಗೆ, ಕುಂದಾಪುರದ ಕನ್ನಡವನ್ನು ಯಾರೂ ಬಳಸಿದ್ದು ನನ್ನ ಗಮನಕ್ಕೆ ಬಂದಿಲ್ಲ. ವೈದೇಹಿ ಈಗೀಗ ಬಳಸುವ ಪ್ರಯತ್ನ ಮಾಡ್ತಿದಾರೆ. ತೃತೀಯ ದರ್ಜೆಯ ಟೀವಿ ಕಾರ್ಯಕ್ರಮಗಳ ಡೈಲಾಗುಗಳಲ್ಲಿ ಅದು ಬರುತ್ತೆ. ಅದನ್ನು ನಾನು ಪರಿಗಣಿಸುವುದಿಲ್ಲ. ಕಾರಂತರು ಬಳಸುವ ಅವಕಾಶ ಧಾರಾಳವಾಗಿದ್ದವು. ಅವರ ಮನೆಮಾತೇ ಅದಾಗಿತ್ತಲ್ಲ. ಆದರೂ ಅವರು ಪ್ರಜ್ಞಾಪೂರ್ವಕವಾಗಿ ದೂರ ಇಟ್ಟರು. ಹಾಗಾಗಿ ಅವರಲ್ಲಿ ಬ್ರಾಹ್ಮಣರ ಪಾರೋತಿ ಮಾತಾಡೋದು, ಮನೆ ಕೆಲಸದಾಳು ಮಾತಾಡೋದು ಒಂದೇ ಕನ್ನಡವನ್ನ. ಕೋಟದಲ್ಲಿ ಬೇರೆಬೇರೆ ಜಾತಿಯವರು ಮಾತಾಡೋ ಕನ್ನಡ ಒಂದೇ ಅಲ್ಲ. ಅಲ್ಲಿ ಬಳಕೆಯಾಗಿರೋದು ಎಲ್ಲಿ ಬೇಕಾದರೂ ಸಲ್ಲುವಂಥ ಶಿಷ್ಟಕನ್ನಡ. ಅದಕ್ಕೆ ಅವರೇ ಒಂದು ವಿವರಣೆ ಕೊಟ್ಟಿದ್ದಾರೆ: 'ನಾನು ಈ ಕನ್ನಡದಲ್ಲೇ ಬರೀತಿನಿ. ಯಾಕಂದರೆ ಕರ್ನಾಟಕದಲ್ಲಿರುವ ಎಲ್ಲರೂ ಓದಬೇಕು' ಅಂತ. ಈ ಕಾರಣ ಸಮರ್ಪಕವಾಗಿ ಇದ್ದಿದ್ದರೆ ದೇವನೂರರು ಯಾಕೆ 'ಕುಸುಮಬಾಲೆ'ಯನ್ನ ಆ ಭಾಷೆಯಲ್ಲೆ ಬರೀಬೇಕಾಗಿತ್ತು?

◆ **ತಂದೆಯವರು ಏನು ಮಾಡ್ತಿದ್ದರು?**

ಅಪ್ಪ ಮಣಿಪಾಲ್ ಸ್ಕೂಲಲ್ಲಿ ಮೇಷ್ಟರಾಗಿದ್ದರು. ಮಧ್ಯಮಧ್ಯದಲ್ಲಿ ಆರೋಗ್ಯ ಹಾಳಾಗಿದ್ದರಿಂದ ಕೆಲಸಾನೂ ಕಳಕೋತಿದ್ದರು. ನನಗೆ ಗೊತ್ತಿರುವ ಹಾಗೆ ಏಳೆಂಟು ಸಲ ಉದ್ಯೋಗ ಕಳಕೊಂಡಿದಾರೆ. ಒಂದು ಉದ್ಯೋಗವನ್ನ ಅಷ್ಟು ಸಲ ಕಳಕೊಂಡರೆ ಒಬ್ಬ ಮನುಷ್ಯನ ಸಂಸಾರ ಹ್ಯಾಗಾಗುತ್ತೆ?

◆ **ಕನ್ನಡದಲ್ಲಿ ತುಂಬ ಓದಿಕೊಂಡಿರೊ ವಿದ್ವಾಂಸರಲ್ಲಿ ನೀವೂ ಒಬ್ಬರು...**

ಈಗ ನನ್ನ ರೀಡಿಂಗ್ ಬಗ್ಗೆ ಏನೂ ಕೇಳದೇ ಇರೋದೇ ಒಳ್ಳೇದು. ಲೈಬ್ರರಿಗೆ ಹೋದರೆ ಐ ರಿಯಲಿ ಫೀಲ್ ಗಿಲ್ಟ್. ನಾನು ಓದದೆ ಇರೋ ಎಷ್ಟು ಒಳ್ಳೆಯ ಪುಸ್ತಕಗಳಿವೆಯಲ್ಲ ಅನ್ಸುತ್ತೆ. ಐ ಹ್ಯಾವ್ ಬಿಕಮ್ ಆನ್ ಇಲ್ಲಿಟರೇಟ್. ಮೊದಲಿನ ಹಾಗೆ ಓದುವ ವ್ಯವಧಾನವೂ ಇಲ್ಲ.

◆ **ನಿಮ್ಮ ಓದಿನ ಹವ್ಯಾಸ ಯಾವಾಗ ಶುರುವಾಯಿತು?**

ತುಂಬಾ ಎಳೆಯ ಪ್ರಾಯದಲ್ಲೇ ಶುರುವಾಯಿತು. ನನ್ನ ಮಾವ ಬೈಕಾಡಿ ವೆಂಕಟಕೃಷ್ಣರಾಯರು ಶಿವರಾಮ ಕಾರಂತರಿಗೆ ಆಪ್ತರು. ಕಾರಂತರು ತಮ್ಮ ಎಲ್ಲ ಕಾದಂಬರಿಗಳನ್ನು ಅವರಿಗೆ ಹಸ್ತಾಕ್ಷರ ಸಮೇತ ಉಡುಗೊರೆಯಾಗಿ ಕೊಟ್ಟುಬಿಡೋರು. ಅವರಿಂದ ಪಡೆದು ಓದುತ್ತಿದ್ದೆ. ಐ ಥಿಂಕ್ ಆರನೇ ಕ್ಲಾಸಲ್ಲೇ 'ಮರಳಿ ಮಣ್ಣಿಗೆ'ಯನ್ನು ಓದಿದ್ದೆ. ಅದು ಹೆಚ್ಚೂ ಕಡಿಮೆ ನಮ್ಮದೇ ಕತೆ ಅನಿಸಿಬಿಟ್ಟಿತ್ತು.